**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಸೇಡಂ.**

**ಸಿಸಿ ನಂ.582/2018**

ಫಿರ್ಯಾದಿಃ ಕರ್ನಾಟಕ ಸರಕಾರ ಪರಃ ಸೇಡಂ ಪೊಲೀಸ್ ಠಾಣೆ,

-ಃಃ ವಿರುದ್ದ ಃಃ-

ಆರೋಪಿ ನಂಃ 1. ರಮೇಶ ತಂದೆ ತಿಪ್ಪಣ್ಣ ಹೂಗಾರ
ವಃ 24 ವರ್ಷ, ಉಃ ಒಕ್ಕಲುತನ

2. ಮಲ್ಲಮ್ಮ ಗಂಡ ತಿಪ್ಪಣ್ಣ ಹೂಗಾರ
ವಃ 45 ವರ್ಷ, ಉಃ ಕೂಲಿ ಕೆಲಸ

3. ಲಕ್ಷ್ಮಿ ಗಂಡ ಕಾಶಿನಾಥ ಹೂಗಾರ
ವಃ 26 ವರ್ಷ, ಉಃಕೂಲಿ ಕೆಲಸ

4. ನಿರ್ಮಲಾ ಗಂಡ ಸಿದ್ದಣ್ಣ ಹೂಗಾರ
ವಃ 32 ವರ್ಷ, ಉಃ ಕೂಲಿ ಕೆಲಸ

5. ಮಹಾನಂದ ಗಂಡ ರಾಜು ಹೂಗಾರ
ವಃ 22ವರ್ಷ, ಉಃ ಕೂಲಿ ಕೆಲಸ

6. ಶರಣಪ್ಪ ತಂದೆ ವಿಶ್ವನಾಥ ಹೂಗಾರ
ವಃ 33 ವರ್ಷ, ಉಃ ಕೂಲಿ ಕೆಲಸ

7. ವಿಜಯಲಕ್ಷ್ಮೀ ಗಂಡ ಪ್ರಹ್ಲಾದ ಹೂಗಾರ
ವಃ 35 ವರ್ಷ , ಉಃ ಕೂಲಿ ಕೆಲಸ

8. ಶಿವಲಿಲಾ ಗಂಡ ಶರಣಪ್ಪ ಹೂಗಾರ
ವಃ 28 ವರ್ಷ, ಉಃ ಕೂಲಿ ಕೆಲಸ
ಎಲ್ಲರೂ ಸಾಃ ಕೊಡ್ಲಾ, ತಾಃ ಸೇಡಂ

----

**ದೋಷಾರೋಪಣೆ**

ನಾನು **ಶ್ರೀ ಬಾಲು**, ಬಿಎ.,ಎಲ್.ಎಲ್.ಬಿ., ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರು, ಸೇಡಂ, ನಿಮ್ಮ ಮೇಲೆ ಹೊರಿಸುವ ಆರೋಪವೇನೆಂದರೆ,

ದಿನಾಂಕ 26-06-2018 ರಂದು ರಾತ್ರಿ 9-00 ಗಂಟೆ ಸುಮಾರಿಗೆ ಸೇಡಂ ಪೋಲೀಸ ಠಾಣೆಯ ಹದ್ದಿಯ ಪೈಕಿ ಕೊಡ್ಲಾ ಗ್ರಾಮದ ಪಿರ್ಯಾದಿ ಮನೆಯಲ್ಲಿದ್ದಾಗ ಚಾಸಾ.1 ನೇದ್ದವರು ತನ್ನ ಮನೆಯಲ್ಲಿದ್ದಾಗ ಆರೋಪಿ 1 ರಿಂದ 8 ನೇದ್ದವರು ಅಕ್ರಮಕೂಟ ರಚಿಸಿಕೊಂಡು ಬಂದು ರಂಡಿ ಸುಶೀಲಾ

ಮನೆಯ ಹೊರಗಡೆ ಬಾ ಮನೆಯಲ್ಲಿ ಏನು ಮಾಡುತ್ತಿ ನಮ್ಮ ಹೊಲದಲ್ಲಿ ಪಾಲ ಬೇಕಂತೆ ಅಂತಾ ಅವಾಚ್ಯ ಶಬ್ದಗಳಿಂದ ಬೈದು ಜಗಳ ತೆಗೆದು ಸಾರ್ವಜನಿಕ ಶಾಂತಿ ಭಂಗ ಉಂಟುಮಾಡಿರುತ್ತಾರೆ ಆ ಮೂಲಕ ಆರೋಪಿತರಾದ ನೀವು ಭಾ.ದಂ.ಸಂ. ಕಲಂ 143, 147 ಸಹ ಕಲಂ 149 ಅಡಿಯಲ್ಲಿ ಶಿಕ್ಷಾರ್ಹ ಅಪರಾಧಗಳನ್ನು ಮಾಡಿರುತ್ತೀರಿ, ಅದು ನನ್ನ ಸಂಜ್ಞೆತೆಗೆ ಬಂದಿರುತ್ತದೆ.

ಎರಡನೆಯದಾಗಿ ಮೇಲೆ ಹೇಳಲಾದ ದಿನ ಸಮಯ ಮತ್ತು ಸ್ಥಳದಲ್ಲಿ ಆರೋಪಿತರೆಲ್ಲರೂ ಏಕೋದ್ದೇಶದಿಂದ ಅಕ್ರಮಕೂಟ ರಚಿಸಿಕೊಂಡು ಬಂದು ಚಾಸಾ 1 ರವರಿಗೆ ಬೈಯುತ್ತಿದ್ದಾಗ ಫಿರ್ಯಾದಿ ಮನೆಯ ಒಳಗಿನಿಂದ ಬಂದು ಯಾಕೆ ಈ ತರಹ ಬೈಯುತ್ತಿದ್ದಿರಿ ಅಂತ ಕೇಳಿದ್ದಕ್ಕೆ ಸದರಿಯವರಿಗೆ ಆಪಾದಿತರಾದ 2 ರಿಂದ 4 ನೇದ್ದವರು ತಡೆದು ನಿಲ್ಲಿಸಿದ್ದು ಆ ಮೂಲಕ ಆರೋಪಿತರಾದ ನೀವು ಭಾ.ದಂ.ಸಂ. 341ಸಹವಾಚಕ ಕಲಂ 149ರಡಿಯಲ್ಲಿ ಶಿಕ್ಷಾರ್ಹ ಅಪರಾಧಗಳನ್ನು ಮಾಡಿರುತ್ತೀರಿ, ಅದು ನನ್ನ ಸಂಜ್ಞೆತೆಗೆ ಬಂದಿರುತ್ತದೆ.

ಮೂರನೆಯದಾಗಿ ಮೇಲೆ ಹೇಳಲಾದ ದಿನ ಸಮಯ ಮತ್ತು ಸ್ಥಳದಲ್ಲಿ ಆರೋಪಿತರೆಲ್ಲರೂ ಏಕೋದ್ದೇಶದಿಂದ ಅಕ್ರಮಕೂಟ ರಚಿಸಿಕೊಂಡು ಬಂದು, ಪಿರ್ಯಾದಿಗೆ ಆರೋಪಿತರಾದ 2 ರಿಂದ 4 ನೇದ್ದವರು ಕೈಯಿಂದ ಹೊಡೆದಿರುತ್ತಾರೆ ಆ ಮೂಲಕ ಆರೋಪಿತರಾದ ನೀವು ಭಾ.ದಂ.ಸಂ. 323 ಸಹವಾಚಕ ಕಲಂ 149ರಡಿಯಲ್ಲಿ ಶಿಕ್ಷಾರ್ಹ ಅಪರಾಧಗಳನ್ನು ಮಾಡಿರುತ್ತೀರಿ, ಅದು ನನ್ನ ಸಂಜ್ಞೆತೆಗೆ ಬಂದಿರುತ್ತದೆ.

ನಾಲ್ಕನೆಯದಾಗಿ ಮೇಲೆ ಹೇಳಲಾದ ದಿನ ಸಮಯ ಮತ್ತು ಸ್ಥಳದಲ್ಲಿ ಆರೋಪಿತರೆಲ್ಲರೂ ಏಕೋದ್ದೇಶದಿಂದ ಅಕ್ರಮಕೂಟ ರಚಿಸಿಕೊಂಡು ಬಂದು ಆರೋಪಿ 1 ನೇದ್ದವನು ಫಿರ್ಯಾದಿ ಕೈ ಹಿಡಿದು ಎಳೆದಾಡಿದಲ್ಲದೆ ಕೈಯಿಂದ ಹೊಡೆದು ಲೈಂಗಿಕ ಕಿರುಕುಳ ನೀಡಿದ್ದು, ಆ ಮೂಲಕ ಆರೋಪಿತರಾದ ನೀವು ಭಾ.ದಂ.ಸಂ. ಕಲಂ 354 ಸಹವಾಚಕ ಕಲಂ 149 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧಗಳನ್ನು ಮಾಡಿರುತ್ತೀರಿ, ಅದು ನನ್ನ ಸಂಜ್ಞೆತೆಗೆ ಬಂದಿರುತ್ತದೆ.

ಐದನೆಯದಾಗಿ ಮೇಲೆ ಹೇಳಲಾದ ದಿನ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವು ಏಕೋದ್ದೇಶದಿಂದ ಅಕ್ರಮಕೂಟ ರಚಿಸಿಕೊಂಡು ಬಂದು, ಆರೋಪಿತರಾದ 1 ರಿಂದ 8 ನೇದ್ದವರು ಬಂದು ಚಾಸಾ.1 ರವರಿಗೆ ರಂಡಿ ಸುಶೀಲಾ ಅಂತಾ ಹಾಗೂ ಚೋದಿ ನಮ್ಮ ಹೊಲದಲ್ಲಿ ಪಾಲ ಬೇಕಂತೆ ಬೋಸಡಿಗೆ ಅಂತಾ ಅವಾಚ್ಯ ಶಬ್ದಗಳಿಂದ ಬೈದು ಸಾರ್ವಜನಿಕ ಶಾಂತತೆಗೆ ಭಂಗ ಉಂಟು ಮಾಡಿದ್ದು ಆ ಮೂಲಕ ಆರೋಪಿತರಾದ ನೀವು ಭಾ.ದಂ.ಸಂ.504 ಸಹವಾಚಕ ಕಲಂ 149ರಡಿಯಲ್ಲಿ ಶಿಕ್ಷಾರ್ಹ ಅಪರಾಧಗಳನ್ನು ಮಾಡಿರುತ್ತೀರಿ, ಅದು ನನ್ನ ಸಂಜ್ಞೆತೆಗೆ ಬಂದಿರುತ್ತದೆ.

ಕೊನೆಯದಾಗಿ ಮೇಲೆ ಹೇಳಲಾದ ದಿನ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವು ಏಕೋದ್ದೇಶದಿಂದ ಅಕ್ರಮಕೂಟ ರಚಿಸಿಕೊಂಡು ಬಂದು, ಆಪಾದಿತರಾದ 5 ರಿಂದ 8 ನೇದ್ದವರು ಈ ರಂಡಿಗೆ ಬಿಡಬ್ಯಾಡರಿ ಜೀವ ತೆಗೆಯಿರಿ ಸಾಯಿಸಿ ಬಿಡಿರಿ ಎಲ್ಲಾ ಪಾಲ ನಿಮಗೆ ಬರುತ್ತದೆ ಅಂತಾ ಜೀವದ ಬೇದರಿಕೆ ಹಾಕಿ ಹೋಗಿದ್ದು, ನೀವು ಭಾ.ದಂ.ಸಂ.ಕಲಂ 506 ಸಹವಾಚಕ ಕಲಂ 149ರಡಿಯಲ್ಲಿ ಶಿಕ್ಷಾರ್ಹ ಅಪರಾಧಗಳನ್ನು ಮಾಡಿರುತ್ತೀರಿ, ಅದು ನನ್ನ ಸಂಜ್ಞೆತೆಗೆ ಬಂದಿರುತ್ತದೆ.

ಕಾರಣ ಮೇಲೆ ಹೇಳಿದ ಅಪರಾಧಗಳಿಗಾಗಿ ವಿಚಾರಣೆ ಎದುರಿಸಬೇಕೆಂದು ನಿರ್ದೇಶಿಸುತ್ತಿದ್ದೇನೆ.

ಸಹಿ/-

ದಿನಾಂಕಃ 02-04-2025 ಪ್ರ.ದ.ನ್ಯಾ.ದಂ. ಸೇಡಂ.

**<u>ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಸೇಡಂ.</u>**

**<u>ಸಿಸಿ ನಂ.582/2018</u>**

ಫಿರ್ಯಾದಿಃ ಕರ್ನಾಟಕ ಸರಕಾರ ಪರಃ ಸೇಡಂ ಪೊಲೀಸ್ ಠಾಣೆ,

-ಃಃ ವಿರುದ್ದ ಃಃ-

ಆರೋಪಿ ನಂಃ 1. ರಮೇಶ ತಂದೆ ತಿಪ್ಪಣ್ಣ ಹೂಗಾರ
ವಃ 24 ವರ್ಷ, ಉಃ ಒಕ್ಕಲುತನ
ಸಾಃ ಕೊಡ್ಲಾ , ತಾಃ ಸೇಡಂ ಹಾಗೂ ಇತರರು .

**<u>ಆರೋಪಿತರ ಹೇಳಿಕೆ</u>**

ಪ್ರಃ-1) ಈ ಓದಿ ಹೇಳಲಾದ ದೋಷಾರೋಪಣೆಯನ್ನು ಕೇಳಿ ತಿಳಿದುಕೊಂಡಿರುವಿರಾ?

ಉಃ- ಆ-1

ಆ-2

ಆ-3

ಆ-4

ಆ-5

ಆ-6

ಆ-7

ಆ-8

ಪ್ರಃ-2) ನಿಮ್ಮ ತಪ್ಪನ್ನು ಒಪ್ಪಿಕೊಳ್ಳುತ್ತಿರೊ ಅಥವಾ ವಿಚಾರಣೆ ನಡೆಯಬೇಕಾ?

ಉಃ- ಆ-1

ಆ-2

ಆ-3

ಆ-4

ಆ-5

ಆ-6

ಆ-7

ಆ-8

(ದೋಷಾರೋಪಣೆಯನ್ನು ಆರೋಪಿತರಿಗೆ ಓದಿ ಹೇಳಿದ್ದು, ಅವರು ನೀಡಿದ ಹೇಳಿಕೆಯನ್ನು ಯಥಾವತ್ತಾಗಿ ದಾಖಲಿಸಿದ್ದು, ಅದು ಸಂಪೂರ್ಣ ಸತ್ಯವಾಗಿರುತ್ತದೆಂದು ಪ್ರಮಾಣೀಕರಿಸುತ್ತೇನೆ)

ಸಹಿ/-

ದಿನಾಂಕಃ 02-04-2025 ಪ್ರ.ದ.ನ್ಯಾ.ದಂ. ಸೇಡಂ.